**ಪಾಠ-2** **ಜನವರಿ 1-7**

# ಇಬ್ರಿಯ ಪತ್ರಿಕೆಯ ಸಂದೇಶ



**ಸಬ್ಬತ್ತಿನ ಮಧ್ಯಾಹ್ನ :** ಈ ವಾರದ ಪಾಠದ ಅಧ್ಯಯನಕ್ಕಾಗಿ ಓದಿರಿ : **ಇಬ್ರಿ 1:5-14, ಲೂಕ 1:30-33, ಕೀರ್ತ 132:1-5, ಇಬ್ರಿ 2:14-16, ಇಬ್ರಿ 5:1-4, 1 ಪೇತ್ರ 2:9, ಇಬ್ರಿ 8:8-12.**

**ಸ್ಮರಣವಾಕ್ಯ : "ನಾವು ಈಗ ಹೇಳುವ ಸಂಗತಿಗಳಲ್ಲಿ ಮುಖ್ಯವಾದ ಮಾತೇನೆಂದರೆ ಪರಲೋಕದೊಳಗೆ ಮಹತ್ವವುಳ್ಳ ದೇವರ ಸಿಂಹಾಸನದ ಬಲಗಡೆಯಲ್ಲಿ ಆಸನಾರೂಢನಾದಂಥ ಮಹಾಯಾಜಕನು ನಮಗಿದ್ದಾನೆ** (ಇಬ್ರಿಯ 8:1).

ಕ್ರಿ.ಶ. ಸುಮಾರು 100ನೇ ವರ್ಷದಲ್ಲಿ ಇಬ್ರಿಯರಿಗೆ ಬರೆದ ಪತ್ರಿಕೆಯ ನಂತರ ಕೆಲವು ದಶಕಗಳಲ್ಲಿ ಬರೆದ ಯಹೂದ್ಯ ದಾಖಲೆಯಲ್ಲಿ ಒಂದು ಪ್ರಾರ್ಥನೆಯಿದೆ: "ಓ ಕರ್ತನೇ! ಈ ಎಲ್ಲಾ ಮಾತುಗಳನ್ನು ನಿನ್ನ ಮುಂದೆ ಅರುಹುತ್ತಿದ್ದೇನೆ. ಯಾಕೆಂದರೆ ನೀನು ಈ ಭೂಮಿಯನ್ನು ನಮಗೋಸ್ಕರ ಸೃಷ್ಟಿಸಿರುವೆ.... ಈವಾಗ ಕರ್ತನೆ ಏನೂ ಅಲ್ಲವೆಂದು ಹೆಸರಾಗಿರುವ ಈ ಜನಾಂಗಗಳು ನಮ್ಮ ಮೇಲೆ ದಬ್ಬಾಳಿಕೆ ನಡೆಸಿ ನಮ್ಮನ್ನು ನಮ್ಮನ್ನು ತಿಂದುಹಾಕುತ್ತಿವೆ. ಆದರೆ ಜೇಷ್ಠ ಪುತ್ರರು (ಚೊಚ್ಚಲ ಮಕ್ಕಳು) ನನ್ನ ಒಬ್ಬನೇ ಮಗ ನನಗಾಗಿ ಹುರುಪುಳ್ಳವರು ಎಂದು ಕರೆಯುವ ನಿನ್ನ ಪ್ರಿಯ ಜನರಾದ ನಮ್ಮನ್ನು ಅವರ ಕೈಗಳಿಗೆ ಒಪ್ಪಿಸಿಕೊಟ್ಟಿರುವೆ" - ಜೇಮ್ಸ್ ಎಚ್. ಚಾರ್ಲ್ಸ್‌ವರ್ತ್‌ರವರ ಓಲ್ಡ್ ಟೆಸ್ಟಾಮೆಂಟ್ ಸೂಡಿಪಿಗ್ರಾಫ್ ಪುಟ 536.

* ಈ ವಾರದ ಪಾಠವನ್ನು ಜನವರಿ 8ರ ಸಬ್ಬತ್ತಿಗೆ ಸಿದ್ಧಪಡಿಸಿಕೊಳ್ಳಿರಿ.

ಇಬ್ರಿಯ ಪತ್ರಿಕೆಯ ಓದುಗರಿಗೆ ಪ್ರಾಯಶಃ ಇಂಥಾ ಅನುಭವವೇ ಆಗಿರಬಹುದು. ಅವರು ದೇವರ ಮಕ್ಕಳಾಗಿದ್ದ ಪಕ್ಷದಲ್ಲಿ ಅವರೇಕೆ ಅಂಥ ಕಷ್ಟಗಳನ್ನು ಅನುಭವಿಸುತ್ತಿದ್ದಾರೆ?

ಹಾಗಾಗಿ ಕಷ್ಟಶೋಧನೆಗಳಲ್ಲಿ ವಿಶ್ವಾಸಿಗಳು ತಮ್ಮ ನಂಬಿಕೆಯನ್ನು ಬಲಪಡಿಸಿಕೊಳ್ಳುವಂತೆ ಪೌಲನು ಈ ಪತ್ರಿಕೆಯನ್ನು ಬರೆದಿದ್ದಾನೆ. ದೇವರು ತನ್ನ ಬಲಪಾರ್ಶ್ವದಲ್ಲಿ ಆಸನಾರೂಢನಾಗಿರುವ ಮತ್ತು ನಮ್ಮನ್ನು ತನ್ನ ಬಳಿಗೆ ಕರೆದುಕೊಂಡು ಹೋಗಲು ಬೇಗನೆ ಬರುವ ಯೇಸುಕ್ರಿಸ್ತನ ಮುಖಾಂತರ ತಾನು ಮಾಡಿದ ವಾಗ್ದಾನಗಳನ್ನು ನೆರವೇರಿಸುತ್ತಾನೆಂದು ಅವರಿಗೆ (ನಮಗೂ ಸಹ) ಜ್ಞಾಪಕ ಪಡಿಸುತ್ತಾನೆ.

ಅಷ್ಟರವರೆಗೆ ಯೇಸುವು ನಮಗೆ ದೇವರ ಆಶೀರ್ವಾದಗಳನ್ನು ತರುವ ಮಾಧ್ಯಮವಾಗಿದ್ದಾನೆ. ಆದುದರಿಂದ ನಾವು ಕಡೆಯವರೆಗೆ ನಮ್ಮ ನಂಬಿಕೆಯನ್ನು ಗಟ್ಟಿಯಾಗಿ ಹಿಡಿದುಕೊಳ್ಳಬೇಕು.

**ಭಾನುವಾರ** **ಜನವರಿ 2**

## ಯೇಸುಕ್ರಿಸ್ತನು ನಮ್ಮ ರಾಜನು

ಇಬ್ರಿಯ ಪತ್ರಿಕೆಯ ಮುಖ್ಯವಾದ ಅಂಶವು ದೇವರ ಬಲಪಾರ್ಶ್ವದಲ್ಲಿ ಸಿಂಹಾಸನರೂಢನಾಗಿ ನಮ್ಮನ್ನು ಆಳುವ ಯೇಸುಕ್ರಿಸ್ತನೇ ಆಗಿದ್ದಾನೆ (ಇಬ್ರಿ 8:1). ಸಕಲವನ್ನು ಸೃಷ್ಟಿಸಿದ ಸೃಷ್ಟಿಕರ್ತನಾಗಿ ಯೇಸುಕ್ರಿಸ್ತನು ಸಮಸ್ತ ಸೃಷ್ಟಿಯನ್ನೇ (ವಿಶ್ವವನ್ನೇ) ಆಳುವವನಾಗಿರುತ್ತಾನೆ. ಆದರೆ ಆದಾಮ ಮತ್ತು ಹವ್ವಳು ಪಾಪ ಮಾಡಿದಾಗ ಸೈತಾನನು ಈ ಲೋಕವನ್ನು ಆಳುವ ಅಧಿಕಾರ ಪಡೆದುಕೊಂಡನು ಯೋಹಾನ 12:31, ಯೋಹಾನ 14:30, ಯೋಹಾನ 16:11. ಅಂತು ಇಂತು ಯೇಸುಕ್ರಿಸ್ತನು ಬಂದು ಶಿಲುಬೆಯ ಮೇಲೆ ಸೈತಾನನನ್ನು ಸೋಲಿಸಿ ತನ್ನನ್ನು ರಕ್ಷಕನನ್ನಾಗಿ ಅಂಗೀಕರಿಸಿದವರನ್ನು ಆಳುವ ಅಧಿಕಾರವನ್ನು ಮತ್ತೆ ಪಡೆದುಕೊಂಡನು (ಕೊಲಸ್ಸೆ 2:13–15).

ಇಬ್ರಿಯ ಪತ್ರಿಕೆಯ ಮೊದಲ ಎರಡು ಅಧ್ಯಾಯಗಳು ಯೇಸುಕ್ರಿಸ್ತನನ್ನು ರಾಜಾಧಿರಾಜನನ್ನಾಗಿ ಪರಿಚಯಿಸಲು ವಿಶೇಷವಾಗಿ ಗಮನ ಹರಿಸುತ್ತವೆ.

ಇಬ್ರಿಯ 1:5–14ನ್ನು ಓದಿರಿ ಇಲ್ಲಿ ಏನು ನಡೆಯುತ್ತಾ ಇದೆ?

ಈ ವಚನಗಳನ್ನು ಮೂರು ವಿಭಾಗಗಳನ್ನಾಗಿ ವಿಂಗಡನೆ ಮಾಡಲಾಗಿದೆ. ಪ್ರತಿ ವಿಭಾಗವು ದೇವಪುತ್ರನ ಪಟ್ಟಾಭಿಷೇಕೋತ್ಸವದ ಒಂದು ಅಂಶವನ್ನು ಪರಿಚಯಿಸುತ್ತದೆ. ಮೊದಲನೆಯದು ದೇವರು ಯೇಸುಕ್ರಿಸ್ತನನ್ನು ರಾಜಪುತ್ರನನ್ನಾಗಿ ಸ್ಥಾಪನೆ ಮಾಡುವುದು (ಇಬ್ರಿಯ 1:5) ಎರಡನೆಯದು, ದೇವರು ಮಗನನ್ನು ಪರಲೋಕದ ಆಸ್ಥಾನಕ್ಕೆ ತನ್ನನ್ನು ಆರಾಧಿಸುವವರಿಗೆ ಪರಿಚಯಿಸುವುದು (ಇಬ್ರಿಯ 1:6,8). ಮೂರನೆಯದು, ದೇವರು ಮಗನನ್ನು ಸಿಂಹಾಸನದಲ್ಲಿ ಪ್ರತಿಷ್ಠಾಪಿಸಿ, ಭೂಲೋಕದ ಅಧಿಕಾರವನ್ನು ಆತನಿಗೆ ವಹಿಸಿಕೊಡುವುದು (ಇಬ್ರಿಯ 1:13,14).

ಹೊಸ ಒಡಂಬಡಿಕೆಯ ಅನೇಕ ಶ್ರದ್ಧೆಗಳ ಪೈಕಿ ಬಹಳ ಮುಖ್ಯವಾದ ಶ್ರದ್ಧೆಯು ಯೇಸುಕ್ರಿಸ್ತನ ಕುರಿತಾದುದು. ದೇವರು ತನ್ನ ವಾಗ್ದಾನಗಳನ್ನು ದಾವೀದನಲ್ಲಿ ನೆರವೇರಿಸಿದನು (2 ಸಮು 7:8–16 ಮತ್ತು ಲೂಕ 1:30–33). ಯೇಸುಕ್ರಿಸ್ತನು ದಾವೀದನಗರದಲ್ಲಿ ದಾವೀದನ ಸಂತತಿಯಲ್ಲಿ ಹುಟ್ಟಿ ಬಂದನು (ಮತ್ತಾಯ 1:1–16, ಲೂಕ 2:10,11).

ಆತನು ಸುವಾರ್ತಾ ಸೇವೆಯನ್ನು ಮಾಡುವಾಗ ಜನರು ಆತನನ್ನು ದಾವೀದ ಕುಮಾರನೆಂದು ಕರೆಯುತ್ತಿದ್ದರು. ಆತನು ತನ್ನನ್ನು ಯೆಹೂದ್ಯರ ಅರಸನು ಎಂದು ಕರೆದುಕೊಂಡನೆಂಬ ಆರೋಪವನ್ನು ಹೊರಿಸಿ ಶಿಕ್ಷೆಗೆ ಒಳಪಡಿಸಲಾಯ್ತು (ಮತ್ತಾಯ 27:37). ದಾವೀದನಿಗೆ ಮಾಡಿದ ವಾಗ್ದಾನಗಳ ನಿಮಿತ್ತ ಯೇಸುಕ್ರಿಸ್ತನು ಸಮಾಧಿಯನ್ನು ಜಯಿಸಿ ಎದ್ದನೆಂದು ಕ್ಷೇತ್ರ ಮತ್ತು ಪೌಲರು ಉಪದೇಶಿಸಿದರು (ಅ.ಕೃ 2:22–36, ಅ.ಕೃ 13:22–37). ಯೋಹಾನನು ಯೇಸುಕ್ರಿಸ್ತನನ್ನು 'ಯೂದ ಕುಲದ ಸಿಂಹವೆಂದು' ಗುರುತಿಸುತ್ತಾನೆ (ಪ್ರಕ 5:5). ಇಬ್ರಿಯ ಪತ್ರಿಕೆಯಲ್ಲಿರುವ ಸಂದೇಶಗಳು ನಿಜವಾಗಿಯೂ ಸಾಮರಸ್ಯವುಳ್ಳವುಗಳಾಗಿವೆ. ದೇವರು ದಾವೀದನಿಗೆ ಮಾಡಿದ ವಾಗ್ದಾನಗಳನ್ನು ಯೇಸುಕ್ರಿಸ್ತನಲ್ಲಿ ನೆರವೇರಿಸಿದನು. ದೇವರು ಆತನಿಗೆ ದೊಡ್ಡ ಹೆಸರನ್ನು ದಯಪಾಲಿಸಿದನು (ಇಬ್ರಿಯ 1:4). ಆತನನ್ನು ತನ್ನ ಒಬ್ಬನೇ ಮಗನೆಂದು ಪ್ರತಿಷ್ಠಾಪಿಸಿಕೊಂಡನು (ಇಬ್ರಿ 1:5). ಆತನನ್ನು ಶಾಶ್ವತವಾಗಿ ಸೃಷ್ಟಿಕರ್ತನನ್ನಾಗಿಯೂ ಒಡೆಯನನ್ನಾಗಿಯೂ ಸ್ಥಿರಪಡಿಸಿದನು (ಇಬ್ರಿ 1:8–12) ಮತ್ತು ತನ್ನ ಬಲಗಡೆಯಲ್ಲಿ ಕೂರಿಸಿಕೊಂಡನು (ಇಬ್ರಿ 1:13,14). ಇನ್ನೂ ಹೆಚ್ಚಾಗಿ ಹೇಳಬೇಕೆಂದರೆ, ಇಬ್ರಿಯ

4ನೇ ಅಧ್ಯಾಯದ ಪ್ರಕಾರ ಯೇಸುವು ಜನರನ್ನು ದೇವರ ಶಾಶ್ವತವಾದ ವಿಶ್ರಾಂತಿಗೆ (ರಕ್ಷಣೆಗೆ) ನಡೆಸಿಕೊಂಡು ಹೋಗುತ್ತಾನೆ ಮತ್ತು ಯೇಸುವು ದೇವರ ಮನೆಯನ್ನು ಕಟ್ಟುವ ಕಟ್ಟಣಗಾರನೆಂದು ನಮಗೆ ನೆನಪು ಮಾಡುತ್ತವೆ (ಇಬ್ರಿಯ 3:3,4).

ನಮ್ಮ ನಿಷ್ಠೆಯನ್ನು ದುರಾಕ್ರಮಣದಿಂದ ಕಿತ್ತುಕೊಳ್ಳುವ ಸೈತಾನನ ಜೊತೆ ಹೋರಾಟದಲ್ಲಿ ತೊಡಗಿರುವ ಯೇಸುವು ಕಡೆಯಲ್ಲಿ ಈ ಭೂಲೋಕದ ನ್ಯಾಯಬದ್ಧ ಆಡಳಿತಗಾರನಾಗುತ್ತಾನೆ.

**ಸೋಮವಾರ** **ಜನವರಿ 3**

## ಯೇಸುವು ನಮ್ಮ ಮಧ್ಯಸ್ಥನು

ವಿಶೇಷವಾಗಿ ಕಷ್ಟ ಶೋಧನೆಗಳ ಮಧ್ಯದಲ್ಲಿ, ಯೇಸುವು ಸಮಸ್ತವನ್ನೂ ಆಳುವವನೂ ಎಂಬ ತಿಳುವಳಿಕೆಯು ನಮಗೆ ಹೇಗೆ ಆದರಣೆಯನ್ನು ನೀಡುತ್ತದೆ?

ಯೇಸುಕ್ರಿಸ್ತನು ನಮ್ಮ ಮಧ್ಯಸ್ಥನು ವಾಗ್ದಾನಯುತ ದಾವೀದನ ವಂಶದ ಪ್ರಭುವು ತಂದೆಯ ಸನ್ನಿಧಾನದಲ್ಲಿ ಜನಾಂಗವನ್ನು ಪ್ರತಿನಿಧಿಸುತ್ತಾನೆ. ಸ್ವಾರಸ್ಯವಾದ ಪರಿಕಲ್ಪನೆಯ ಹಳೆಯ ಒಡಂಬಡಿಕೆಯಲ್ಲಿದೆ ವಿಮೋಚನಕಾಂಡ 4:22,23ನ್ನು 2 ಸಮುವೇಲ 7:12–14ರ ಜೊತೆ ಧ.ಕಾಂಡ 12:8–10ನ್ನು 2 ಸಮುವೇಲ 7:9–12 ರ ಜೊತೆ ಮತ್ತು ಧ.ಕಾಂಡ 12:13,14ನ್ನು ಕೀರ್ತನೆ 132:1–5, 11–14 ರ ಜೊತೆ ಹೋಲಿಕೆ ಮಾಡಿ ನೋಡಿರಿ.

ಇಸ್ರಾಯೇಲ್ಯರಿಗೆ ಮಾಡಿದ ಯಾವ ವಾಗ್ದಾನಗಳು ವಾಗ್ದಾನಯುತ ದಾವೀದ ವಂಶದ ಪ್ರಭುವಿನ ಮೂಲಕ ನೆರವೇರುತ್ತವೆ?

ಇಸ್ರಾಯೇಲ್ ಎಂಬುದು ದೇವರ ಮಗನು, ದೇವರು ಇಸ್ರಾಯೇಲ್ಯರು ತಮ್ಮ ವೈರಿಗಳಿಂದ ದೂರವಾಗಿ ವಿಶ್ರಾಂತಿ ಹೊಂದಿಕೊಳ್ಳುವ ಸ್ಥಳವನ್ನು ಕೊಡುತ್ತಾನೆ. ದೇವರು ತನ್ನ ಹೆಸರು ಅವರಲ್ಲಿ ನೆಲೆಸುವಂತಹ ಒಂದು ಸ್ಥಳವನ್ನು ಆಯ್ಕೆ ಮಾಡಿಕೊಳ್ಳುತ್ತಾನೆ. ಇಸ್ರಾಯೇಲ್ಯರಿಗೆ ಮಾಡಿದ ವಾಗ್ದಾನಗಳು ಈವಾಗ ವಾಗ್ದಾನಯುತ ದಾವೀದ ವಂಶದ ಪ್ರಭುವಿನ ಮೂಲಕ ನೆರವೇರುತ್ತವೆ. ದೇವರು ಆತನನ್ನು ದತ್ತು ಮಗನನ್ನಾಗಿ ಸ್ವೀಕರಿಸುತ್ತಾನೆ. ದೇವರು ಆತನನ್ನು ಶತ್ರುಗಳಿಂದ ತಪ್ಪಿಸಿ ವಿಶ್ರಾಂತಿ ಕೊಡುತ್ತಾನೆ ಮತ್ತು ಆತನು ಚೀಯೋನಿನಲ್ಲಿ ದೇವರ ನಾಮವು

ನೆಲೆಯಾಗಿರುವಂತೆ ದೇವರಿಗೆ ಒಂದು ಆಲಯವನ್ನು ಕಟ್ಟಿಸುತ್ತಾನೆ. ಇದರ ಅರ್ಥವೇನೆಂದರೆ ದೇವರು ತನ್ನ ವಾಗ್ದಾನಗಳನ್ನು ವಾಗ್ದಾನಯುತ ದಾವೀದ ಕುಮಾರನ ಮೂಲಕ ನೆರವೇರಿಸುತ್ತಾನೆ. ಈ ದಾವೀದಕುಮಾರನು (ಅಭಿಷಿಕ್ತ ಪ್ರಭುವು) ತಂದೆಯ ಸನ್ನಿಧಾನದಲ್ಲಿ ಇಸ್ರಾಯೇಲನ್ನು ಪ್ರತಿನಿಧಿಸುತ್ತಾನೆ.

ದೇವರ ಮತ್ತು ಇಸ್ರಾಯೇಲ್ಯರ ಸಂಬಂಧದಲ್ಲಿ ಪ್ರತಿನಿಧಿಯನ್ನು ಅಳವಡಿಸಿಕೊಂಡದ್ದರಿಂದ ದೇವರ ಮತ್ತು ಅವರ ನಡುವೆ ಇರುವ ಒಡಂಬಡಿಕೆಯ ಸಂಬಂಧವು ನಿರಂತರವಾದುದಾಗಿ ಮಾಡಲ್ಪಟ್ಟಿತು.

ಸಮಸ್ತ ಇಸ್ರಾಯೇಲ್ಯರು ದೇವರ ಸಂರಕ್ಷಣೆ ಮತ್ತು ಆಶೀರ್ವಾದಗಳನ್ನು ಪಡೆದುಕೊಳ್ಳಲು ಮೋಶೆಯೊಂದಿಗೆ ಏರ್ಪಟ್ಟ ಒಡಂಬಡಿಕೆಗೆ ಅವರು ನಂಬಿಗಸ್ತರಾಗಿರಬೇಕಾಗಿತ್ತು (ಯೆಹೋಶುವ 7:1–13 ವಚನಗಳನ್ನು ನೋಡಿರಿ). ದಾವೀದ ವಂಶದೊಂದಿಗೆ ಮಾಡಿಕೊಂಡ ದೇವರ ಒಡಂಬಡಿಕೆಯ ಆಶೀರ್ವಾದಗಳು ದಾವೀದಕುಮಾರನಾದ ಒಬ್ಬ ವ್ಯಕ್ತಿಯ ನಂಬಿಗಸ್ತಿಕೆಯ ಮೂಲಕ ಇಸ್ರಾಯೇಲ್ಯರಿಗೆ ದಕ್ಕುತ್ತವೆ.

ದೌರ್ಭಾಗ್ಯವೇನೆಂದರೆ ದಾವೀದ ಸಂತಾನದ ಬಹುತೇಕ ಅರಸರು ನಂಬಿಗಸ್ತರಾಗದ ಕಾರಣ ದೇವರು ಇಸ್ರಾಯೇಲ್ಯರನ್ನು ತನಗೆ ಬೇಕಾದ ರೀತಿಯಲ್ಲಿ ಆಶೀರ್ವಾದ ಮಾಡಲು ಆಗಲಿಲ್ಲ. ಆ ರಾಜರುಗಳಲ್ಲಿ ಅನೇಕರು ಹೇಗೆ ಕೇವಲ ಅಪನಂಬಿಗಸ್ತರಾಗಿದ್ದರು ಎಂಬ ವಿವರಗಳಿಂದ ಹಳೆಯ ಒಡಂಬಡಿಕೆಯು ತುಂಬಿ ಹೋಗಿದೆ.

ಶುಭ ಸಂದೇಶವೇನೆಂದರೆ ದೇವರು ತನ್ನ ಮಗನನ್ನು ದಾವೀದನ ಮಗನಾಗಿ ಹುಟ್ಟುವಂತೆ ಮಾಡಿದನು, ಆತನು ಪರಿಪೂರ್ಣವಾಗಿ ನಂಬಿಗಸ್ತನಾದನು. ಹಾಗಾಗಿ ದೇವರು ಜನರಿಗೆ ಮಾಡಿದ ಎಲ್ಲಾ ವಾಗ್ದಾನಗಳನ್ನು ಆತನಲ್ಲಿ ನೆರವೇರುವಂತೆ ಮಾಡಲು ಸಾಧ್ಯವಾಯ್ತು. ದೇವರು ಅರಸನನ್ನು ಆಶೀರ್ವಾದಿಸುವಾಗ ಜನರೆಲ್ಲರೂ ಆ ಪ್ರಯೋಜನದಲ್ಲಿ ಭಾಗಿಯಾಗುತ್ತಾರೆ. ಈ ಕಾರಣದಿಂದ ಯೇಸುಕ್ರಿಸ್ತನು ದೇವರಿಂದ ನಮಗೆ ದೊರಕುವ ಆಶೀರ್ವಾದಗಳಿಗೆ ಮಧ್ಯಸ್ಥನಾಗಿದ್ದಾನೆ. ಆತನು ದೇವರಿಂದ ಹರಿದು ಬರುವ ಆಶೀರ್ವಾದಗಳಿಗೆ ಕಾಲುವೆಯಾಗಿರುವುದರಿಂದ

ಮಧ್ಯಸ್ಥನೆನಿಸಿಕೊಳ್ಳುತ್ತಾನೆ. ನಮ್ಮ ರಕ್ಷಣೆಯ ಪರಮ ನಿರೀಕ್ಷೆಯು ಯೇಸುಕ್ರಿಸ್ತನಲ್ಲಿ ಮತ್ತು ಆತನು ನಮಗಾಗಿ ಏನು ಮಾಡಿದ್ದಾನೋ ಅದರಲ್ಲಿ ಮಾತ್ರ ಸಿಗುತ್ತದೆ.

ಒಡಂಬಡಿಕೆಗೆ ನೀವು ಎಷ್ಟು ಸಲ ಅಪನಂಬಿಗಸ್ತರಾಗಿದ್ದೀರಿ ಎಂಬುದನ್ನು ಆಲೋಚಿಸಿರಿ. ನಾವು ನಮ್ಮ ರಕ್ಷಣೆಗಾಗಿ ಯೇಸುಕ್ರಿಸ್ತನೊಬ್ಬನಲ್ಲಿ ಮಾತ್ರ ಭರವಸವಿಡಬೇಕೆಂಬುದರ ಬಗ್ಗೆ ಇದು ನಮಗೆ ಏನನ್ನು ಬೋಧಿಸುತ್ತದೆ?

**ಮಂಗಳವಾರ** **ಜನವರಿ 4**

## ಯೇಸು ನಮ್ಮ ವೀರಾಗ್ರಣಿ

1 ಸಮುವೇಲ 8:19,20 ಮತ್ತು ಇಬ್ರಿಯ 2:14–16ನ್ನು ಹೋಲಿಸಿರಿ. ಇಸ್ರಾಯೇಲ್ಯರು ತಮ್ಮನ್ನು ಆಳುವ ರಾಜನು ಎಂಥವನಾಗಿರಬೇಕೆಂದು ಬಯಸಿದರು ಮತ್ತು ಅವರ ಈ ಬಯಕೆಯು ಯೇಸುಕ್ರಿಸ್ತನಲ್ಲಿ ಹೇಗೆ ನೆರವೇರಿತು?

ಇಸ್ರಾಯೇಲ್ಯರು ತಮ್ಮ ನ್ಯಾಯಗಳನ್ನು ತೀರಿಸಿ, ತಮಗೋಸ್ಕರ ಯುದ್ಧ ಮಾಡುವವಂಥ ಒಬ್ಬ ಅರಸನನ್ನು ನೇಮಿಸಬೇಕೆಂದು ಸಮುವೇಲನನ್ನು ಕೇಳಿಕೊಂಡರು, ಯಾಕೆಂದರೆ ದೇವರೆ ಅವರಿಗೆ ಅರಸನಾಗಿದ್ದನು ಎಂಬುದನ್ನು ಅವರು ಮರೆತುಬಿಟ್ಟರು. ದೇವರ ಪರಿಪೂರ್ಣವಾದ ಆಳಿಕೆಯು ಯೇಸುಕ್ರಿಸ್ತನ ಮೂಲಕ ಪುನರ್‌ಸ್ಥಾಪನೆಯಾಯ್ತು. ಯೇಸುಕ್ರಿಸ್ತನು ನಮ್ಮ ಅರಸನಾಗಿ ನಮ್ಮ ವೈರಿಯ ವಿರುದ್ಧ ನಾವು ಮಾಡುವ ಯುದ್ಧದಲ್ಲಿ ನಮ್ಮನ್ನು ಮುನ್ನಡೆಸುತ್ತಾನೆ?

ಇಬ್ರಿಯ 2:14–16 ವಚನಗಳು ಯೇಸುಕ್ರಿಸ್ತನನ್ನು ಬಲಹೀನ ಮನುಷ್ಯರ ಪರವಾಗಿ ಹೋರಾಡ ಬಲ್ಲ ವೀರಾಗ್ರಣಿ ಎಂಬುದಾಗಿ ವಿವರಿಸುತ್ತವೆ ಯೇಸುಕ್ರಿಸ್ತನು ಪಿಶಾಚನ ವಿರುದ್ಧ ನಿಂತು ಹೋರಾಡಿ ಗೆದ್ದು ನಮ್ಮನ್ನು ದಾಸತ್ವದಿಂದ ಬಿಡಿಸುತ್ತಾನೆ. ಈ ನಿರೂಪಣೆಯು (ವಿವರಣೆಯು) ದಾವೀದ್ ಮತ್ತು ಗೊಲ್ಯಾತರ ನಡುವೆ ನಡೆದ ಹೋರಾಟವನ್ನು (ಯುದ್ಧವನ್ನು) ನಮ್ಮ ನೆನಪಿಗೆ ತರುತ್ತದೆ. ದಾವೀದನು ಅರಸನಾಗಿ ಅಭಿಷೇಕ ಹೊಂದಿದ ಮೇಲೆ (1 ಸಮುವೇಲ 16ನೇ ಅಧ್ಯಾಯ) ಗೊಲ್ಯಾತನ ಜೊತೆ ಕಾದಾಡಿ ಅವನನ್ನು ಕೊಂದು ತನ್ನ ಅಣ್ಣಂದಿರನ್ನು ದಾಸತ್ವದಿಂದ ಬಿಡಿಸಿದನು. ಯುದ್ಧ ನಿಯಮದಂತೆ ಗೆದ್ದವರು ಸೋತವರನ್ನು ದಾಸರಂತೆ ನಡೆಸಿಕೊಳ್ಳಬಹುದಾಗಿತ್ತು (1 ಸಮುವೇಲ 17:8–10) ಹಾಗಾಗಿ ದಾವೀದನು

ಇಸ್ರಾಯೇಲ್ಯರ ವೀರನಾಯಕನಾಗಿ ಕಾರ್ಯನಡಿಸಿದನು. ಆತನು ಸಮಸ್ತ ಇಸ್ರಾಯೇಲ್ಯರನ್ನು ಪ್ರತಿನಿಧಿಸುತ್ತಾನೆ.

ಓದಿರಿ ಯೆಶಾಯ 42:13 ಮತ್ತು ಯೆಶಾಯ 59:15–20. ಈ ವಚನಗಳಲ್ಲಿ ಯೆಹೋವನು ತನ್ನನ್ನು ತಾನು ಹೇಗೆ ಚಿತ್ರಿಸಿಕೊಳ್ಳುತ್ತಾನೆ?

ಇಬ್ರಿಯ 2:14–16 ವಚನಗಳು ದೇವರು ಒಬ್ಬನೇ ಹೋರಾಟ ಮಾಡಿ ಇಸ್ರಾಯೇಲ್ಯರನ್ನು ರಕ್ಷಿಸುತ್ತಾನೆಂಬ ಆಲೋಚನೆಗೆ ಪ್ರಸ್ತಾವನೆ ನೀಡುತ್ತದೆ. ಯೆಶಾಯ ಗ್ರಂಥದ ಈ ವಾಕ್ಯಗಳನ್ನು ಗಮನಿಸಿ : 'ಯೆಹೋವನು ಹೀಗನ್ನುತ್ತಾನೆ. ಶೂರನ ಸೆರೆಯವರೂ ಅಪಹರಿಸಲ್ಪಡುವರು, ಭೀಕರನ ಕೊಳ್ಳೆಯೂ ತೆಗೆಯಲ್ಪಡುವುದು ನಿನ್ನೊಡನೆ ಹೋರಾಡುವವನ ಸಂಗಡ ನಾನೇ ಹೋರಾಡಿ ನಿನ್ನ ಮಕ್ಕಳನ್ನು ಉದ್ಧರಿಸುವೆನು' (ಯೆಶಾಯ 49:25).

ಕ್ರೈಸ್ತರಾಗಿ ನಾವು ಅನೇಕ ವೇಳೆ ಸೈತಾನನ ಜೊತೆ ಹೋರಾಟದಲ್ಲಿ ನಿರತರಾಗಿದ್ದೇವೆ ಎಂದು ಆಲೋಚಿಸುತ್ತೇವೆ. ನಾವು ಎಫೆಸ 6:10–18 ವಚನಗಳನ್ನು ಓದುವಾಗ, ನಾವು ಸೈತಾನನ ಜೊತೆ ಹೋರಾಟ ಮಾಡುತ್ತೇವೆಯೆಂದು ತಿಳಿದುಕೊಳ್ಳುತ್ತೇವೆ. ಆದರೆ ದೇವರು ನಮ್ಮ ವೀರಾಗ್ರಣಿ ನಮಗೆ ಮುಂದಾಗಿ ಹೋಗಿ ಯುದ್ಧ ನಡಿಸುತ್ತಾನೆ. ನಾವು ಆತನ ಸೇನೆಯ ಒಂದು ಭಾಗವಾಗಿದ್ದೇವೆ. ಆದುದರಿಂದ ನಾವು ಆತನು ಕೊಡುವ ಅಸ್ತ್ರಗಳನ್ನು ಉಪಯೋಗಿಸಬೇಕು. ನಾವು ಏಕಾಂಗಿಯಾಗಿ ಹೋರಾಡುವವರಲ್ಲ. ಎಫೆಸ 6ನೇ ಅಧ್ಯಾಯವು ನೀವು ಎಂಬುದಾಗಿ ಬಹುವಚನವನ್ನು ಉಪಯೋಗಿಸಿದೆ. ನಾವು ಸಭೆಯಾಗಿ ಅಸ್ತ್ರಾಸ್ತ್ರಗಳನ್ನು ತೆಗೆದುಕೊಂಡು ನಮ್ಮ ವೀರಾಗ್ರಣಿಯಾಗಿರದ ದೇವರನ್ನು ಮುಂದಾಗಿರಿಸಿಕೊಂಡು ಒಟ್ಟಾಗಿ ಹೋರಾಟ ಮಾಡಬೇಕು.

ದೇವರು ದಯಪಾಲಿಸುವ ಸರ್ವಾಯುಧಗಳನ್ನು ಧರಿಸಿಕೊಳ್ಳುವುದು ಎಂಬುದರ ಅರ್ಥವೇನು? ನಮ್ಮ ದೈನಂದಿನ ಜೀವಿತದಲ್ಲಿ ಶೋಧನೆಗಳ ಜೊತೆ ಹೋರಾಟ ಮಾಡುತ್ತೇವೆ. ದೇವರು ಕೊಡುವ ಬಲದ ಮೂಲಕ ನಂಬಿಗಸ್ತರಾಗಿರಲು ಅಗತ್ಯವಾದ ಶಕ್ತಿಯನ್ನು ನಾವು ಹೇಗೆ ಪಡೆದುಕೊಳ್ಳಬಹುದು?

ಬುಧವಾರ ಜನವರಿ 5

## ಯೇಸುಕ್ರಿಸ್ತನು ನಮ್ಮ ಮಹಾಯಾಜಕ

ಇಬ್ರಿಯ 5 ರಿಂದ 7ನೇ ಅಧ್ಯಾಯಗಳು ಯೇಸು ನಿರ್ವಹಿಸುವ ಎರಡನೇ ಕಾರ್ಯವನ್ನು ಪರಿಚಯಿಸುತ್ತವೆ. ಇಲ್ಲಿ ದೇವರು ದಾವೀದ ಸಂತಾನಕ್ಕೆ ಮಾಡಿದ ವಾಗ್ದಾನವು ನೆರವೇರುವುದನ್ನು ಆತನು ಸದಾಕಾಲವು ಮೆಲ್ಕಿಜೆದೇಕನ ತರಹದ ಯಾಜಕನಾಗಿರುತ್ತಾನೆ ಎಂಬುದನ್ನು ಇದರ ಬರಹಗಾರನು ವಿವರಿಸುತ್ತಾನೆ (ಕೀರ್ತನೆ 110:4ನೇ ವಚನವು ಇಬ್ರಿಯ 5:5,6 ವಚನಗಳಲ್ಲಿ ಉಲ್ಲೇಖಿತವಾಗಿದೆ).

ಯಾಜಕಕಾಂಡ 1:1–9, ಯಾಜಕಕಾಂಡ 10:8–11, ಅರಣ್ಯಕಾಂಂಡ 6:22–26 ಮತ್ತು ಇಬ್ರಿಯ 5:1–4ನ್ನು ಓದಿರಿ. ಯಾವ ಕಾರ್ಯವನ್ನು ಯಾಜಕನು ನೆರವೇರಿಸಿದನು?

ಮನುಷ್ಯರನ್ನು ಪ್ರತಿನಿಧಿಸಲು ಮತ್ತು ಅವರ ಮತ್ತು ದೇವರ ನಡುವೆ ಇರುವ ಸಂಬಂಧಕ್ಕೆ ಮಧ್ಯಸ್ಥರಾಗುವ ಸಲುವಾಗಿ ಯಾಜಕರನ್ನು ನೇಮಿಸಲಾಗುತ್ತಿತ್ತು. ಯಾಜಕನು ಒಬ್ಬ ಮಧ್ಯಸ್ಥನು. ಯೆಹೂದ್ಯ ಪದ್ಧತಿಯಾಗಲಿ ರೋಮನ್ ಪದ್ಧತಿಯಾಗಲೀ ಇಲ್ಲವೆ ಯಾವುದೇ ಪದ್ಧತಿಯಾಗಲಿ ಯಾಜಕರು ಮಧ್ಯಸ್ಥರೆಂಬುದು ನಿಜವಾದ ಸಂಗತಿಯಾಗಿದೆ. ನಾವು ನಮ್ಮನ್ನು ದೇವರಿಗೆ ಸಂಬಂಧಿಸಿಕೊಳ್ಳುವಂತೆ ಯಾಜಕನು ಸಹಾಯ ಮಾಡುತ್ತಾನೆ ಮತ್ತು ಯಾಜಕನು ಮಾಡುವ ಪ್ರತಿಯೊಂದು ಕಾರ್ಯವೂ ನಮ್ಮ ಮತ್ತು ದೇವರ ಮಧ್ಯೆ ಇರುವ ಸಂಬಂಧವನ್ನು ಅನುವು ಮಾಡಿಕೊಡುವ ಉದ್ದೇಶದಿಂದ ಕೂಡಿರುತ್ತದೆ.

ಯಾಜಕನು ಮನುಷ್ಯರ ಸಲುವಾಗಿ ಯಜ್ಞಗಳನ್ನು ಸಮರ್ಪಿಸುತ್ತಾನೆ. ಜನರು ಈ ಯಜ್ಞಗಳನ್ನು ತಾವೇ ದೇವರಿಗೆ ಸಮರ್ಪಣೆ ಮಾಡಲಾರರು. ನಾವು ಹೇಗೆ ಅಂಗೀಕಾರವಾಗುವ ಯಜ್ಞಗಳನ್ನು ಸಮರ್ಪಿಸಬಹುದು ಎಂಬುದು ಯಾಜಕರಿಗೆ ತಿಳಿದಿರುತ್ತದೆ. ಆಗ ಮಾತ್ರ ನಮ್ಮ ಯಜ್ಞಗಳು ಅಂಗೀಕರಿಸಲ್ಪಟ್ಟು ನಮ್ಮನ್ನು ಶುದ್ಧೀಕರಿಸಿ ಕ್ಷಮಾಪಣೆ ಹೊಂದುವಂತೆ ಮಾಡುತ್ತವೆ.

ಯಾಜಕರು ಜನರಿಗೆ ದೇವರ ಧರ್ಮಶಾಸ್ತ್ರವನ್ನು ಕಲಿಸಿಕೊಡುತ್ತಾರೆ. ಅವರು ದೇವರ ಕಟ್ಟಳೆಗಳನ್ನು ಜನರಿಗೆ ವಿವರಿಸಿ ಅವುಗಳನ್ನು ಅಳವಡಿಸಿಕೊಳ್ಳುವಂತೆ ಮಾಡುವ ತಜ್ಞರಾಗಿರುತ್ತಾರೆ. ಕೊನೆಯದಾಗಿ, ಯಾಜಕರು ಜನರನ್ನು ಯೆಹೋವನ

ಹೆಸರಿನಲ್ಲಿ ಆಶೀರ್ವದಿಸುವ ಜವಾಬ್ದಾರಿಯನ್ನೂ ಸಹ ಹೊಂದಿದ್ದರು. ಅವುಗಳ ಮುಖಾಂತರ ದೇವರು ತನ್ನ ಉತ್ತಮತ್ವವನ್ನು ಮತ್ತು ಒಳ್ಳೆಯ ಉದ್ದೇಶವನ್ನು ಜನರಿಗೋಸ್ಕರ ಆಲೋಚಿಸುವಂತೆ ಆಗುತ್ತಿತ್ತು.

ಏನೇ ಇರಲಿ 1 ಪೇತ್ರ 2:9ನೇ ವಚನದಲ್ಲಿ ನಾವು ಏನೋ ಒಂದನ್ನು ನೋಡುತ್ತೇವೆ. ಯೇಸುಕ್ರಿಸ್ತನಲ್ಲಿ ವಿಶ್ವಾಸವುಳ್ಳ ನಾವುಗಳು ರಾಜವಂಶಸ್ಥರಾದ ಯಾಜಕರು ಎಂಬುದಾಗಿ ಕರೆಯಲ್ಪಟ್ಟಿದ್ದೇವೆ. ಈ ಜವಾಬ್ದಾರಿಯು ನಮಗೆ ನಂಬಲಾಗದಷ್ಟು ಸವಲತ್ತುಗಳನ್ನು ನೀಡುತ್ತದೆ. ಯಾಜಕರು ದೇವದರ್ಶನ ಗುಡಾರದಲ್ಲಿ ದೇವರ ಸನ್ನಿಧಾನಕ್ಕೆ ಹೋಗಬಹುದಾಗಿತ್ತು. ಹಾಗೆಯೇ ಇಂದು ನಾವು ಪ್ರಾರ್ಥನೆಯ ಮುಖಾಂತರ ವಿಶ್ವಾಸಪೂರ್ವಕವಾಗಿ ದೇವರ ಬಳಿಗೆ ಹೋಗಬಹುದು (ಇಬ್ರಿಯ 4:14–16, ಇಬ್ರಿ 10:19–23). ಹಾಗೆಯೇ ಮುಖ್ಯವಾದ ಜವಾಬ್ದಾರಿಗಳು ಸಹಾ ಇವೆ. ಲೋಕವನ್ನು ರಕ್ಷಿಸುವ ಕಾರ್ಯದಲ್ಲಿ ತೊಡಗಿರುವ ದೇವರಿಗೆ ನಾವು ಜೊತೆ ಕೆಲಸಗಾರರಾಗಿರಬೇಕು. ದೇವರು ತನ್ನ ಕಟ್ಟಳೆಗಳನ್ನು ಮತ್ತು ನೇಮಗಳನ್ನು ಇತರರಿಗೆ ಕಲಿಸಬೇಕೆಂದು ನಮ್ಮನ್ನು ಕರೆಯುತ್ತಾರೆ. ನಾವು ಆತನಿಗೆ ಸ್ತುತಿಯಜ್ಞಗಳನ್ನು ಸಮರ್ಪಿಸುವುದಕ್ಕೂ ಮತ್ತು ಅವನಿಗೆ ಇಷ್ಟವಾಗುವ ಸತ್ಕ್ರಿಯೆಗಳನ್ನು ಮಾಡುವುದಕ್ಕೂ ನಮ್ಮನ್ನು ಕರೆಯುತ್ತಾನೆ. ಎಂಥಾ ಸೌಭಾಗ್ಯವಿದು! ಮತ್ತು ಎಂಥಾ ಜವಾಬ್ದಾರಿಯುತವಾದದು!

ನಾವು ನಿಜವಾಗಿಯೂ ರಾಜವಂಶಸ್ಥರಾದ ಯಾಜಕರಾಗಿರುವುದು ನಮ್ಮ ಜೀವಿತದಲ್ಲಿ ಯಾವ ವ್ಯತ್ಯಾಸವನ್ನು ಮಾಡಬೇಕು? ನಾವು ಹೇಗೆ ಜೀವಿಸುತ್ತೇವೆ ಎಂಬುದಕ್ಕೆ ಈ ಸತ್ಯವು ಪರಿಣಾಮ ಬೀರುತ್ತದೆ ಹೇಗೆ?

**ಗುರುವಾರ** **ಜನವರಿ 6**

## ಯೇಸುವು ಒಳ್ಳೆಯ ಒಡಂಬಡಿಕೆಗೆ ಮಧ್ಯಸ್ಥನು

ಇಬ್ರಿಯ 8, 9 ಮತ್ತು 10 ಅಧ್ಯಾಯಗಳು ಯೇಸುವು ಹೊಸ ಒಡಂಬಡಿಕೆಯ ಮಧ್ಯಸ್ಥನಾಗಿ ಮಾಡುವ ಕೆಲಸಗಳ ಮೇಲೆ ದೃಷ್ಟಿ ಬೀರುತ್ತವೆ. ಹಳೆಯ ಒಡಂಬಡಿಕೆಯ ಎಲ್ಲಾ ಪ್ರಕರಣಗಳು (ದೇವದರ್ಶನ ಗುಡಾರದ ಸೇವೆಗಳು) ಬರಬೇಕಾಗಿದ್ದ ಮೇಲುಗಳ ಛಾಯೆಗಳು ಮಾತ್ರ ಆಗಿದ್ದವು. ಅದರ ಎಲ್ಲಾ ಸ್ಥಾಪನೆಗಳು (ವಿಧಿ ನೇಮಗಳು) ಯೇಸುಕ್ರಿಸ್ತನು ಮುಂದೆ ಮಾಡುವ ಕೆಲಸಗಳನ್ನು ಪ್ರತಿಬಿಂಬಿಸುವ

ನಿದರ್ಶನಗಳಾಗಿದ್ದವು. ಹಾಗಾಗಿ ಅವರು ಕ್ರಿಸ್ತನನ್ನು ಪ್ರತಿಬಿಂಬಿಸುತ್ತಿದ್ದರು ಆದಾಗ್ಯೂ ಅವರು ಕೇವಲ ಮರಣಾಧೀನರು (ಮರ್ತ್ಯರು) ಮತ್ತು ಪಾಪಾತ್ಮರೂ ಆಗಿದ್ದರು. ಆದುದರಿಂದ ಅವರು ಯೇಸುಕ್ರಿಸ್ತನಂತೆ ಪರಿಪೂರ್ಣತೆಯನ್ನು ಪೂರೈಸಲಾರದವ–ರಾಗಿದ್ದರು. ಈ ಲೋಕದ ದೇವದರ್ಶನ ಗುಡಾರದಲ್ಲಿ ನಡೆಯುತ್ತಿದ್ದ ಸೇವೆಗಳು ಪರಲೋಕದಲ್ಲಿ ನಡೆಯುವ ಸೇವೆಗಳ ಮಾದರಿಯಾಗಿದ್ದವು ಮತ್ತು ನಿಜವಾದುದರ ಛಾಯೆಗಳಾಗಿದ್ದವು.

ಯೇಸುವು ದೇವನಿರ್ಮಿತ ಗುಡಾರದಲ್ಲಿ ಸೇವೆ ಗೈಯ್ಯುತ್ತಿದ್ದು ದೇವರ ಸನ್ನಿಧಾನದಲ್ಲಿ ನಮಗೆ ಪ್ರವೇಶ ಸಿಗುವಂತೆ ಮಾಡುತ್ತಿದ್ದಾನೆ. ಅದರಲ್ಲಿ ಸಮರ್ಪಣೆ ಮಾಡುತ್ತಿದ್ದ ಹೋರಿಕುರಿಹೋತಗಳು. ನಮ್ಮ ಪಾಪಗಳ ಸಲುವಾಗಿ ತನ್ನನ್ನೇ ನಮಗೋಸ್ಕರ ಸಮರ್ಪಿಸಿಕೊಂಡ ಕ್ರಿಸ್ತನನ್ನು ಪ್ರತಿಬಿಂಬಿಸುತ್ತಿದ್ದವೇ ವಿನಹ ಅವುಗಳ ರಕ್ತ ನಮ್ಮ ಪಾಪ ಪ್ರಜ್ಞೆಯನ್ನು ಅಳಿಸಿ ಹಾಕುತ್ತಿರಲಿಲ್ಲ. ಅದೇನೆ ಇರಲಿ ಯೇಸುವಿನ ರಕ್ತವು ಆತನಲ್ಲಿ ನಂಬಿಕೆಯಿಟ್ಟು ಆತನ ಮಧ್ಯಸ್ಥಿಕೆಯನ್ನು ಅಂಗೀಕರಿಸುವವರ ಆತ್ಮಸಾಕ್ಷಿಯನ್ನು ಪರಿಶುದ್ಧಗೊಳಿಸಿ ದೇವರ ಸನ್ನಿಧಾನದಲ್ಲಿ ಧೈರ್ಯವಾಗಿ ಪ್ರವೇಶಿಸುವುದಕ್ಕೆ ಸಾಧ್ಯ ಮಾಡುತ್ತದೆ (ಇಬ್ರಿಯ 10:19–22).

ಇಬ್ರಿಯ 8:8–12ನ್ನು ಓದಿರಿ. ಹೊಸ ಒಡಂಬಡಿಕೆಯಲ್ಲಿ ದೇವರು ನಮಗೆ ಯಾವ ವಾಗ್ದಾನ ಮಾಡಿದ್ದಾನೆ?

ದೇವರು ಯೇಸುವನ್ನು ಮಹಾಯಾಜಕನನ್ನಾಗಿ ನೇಮಿಸುವ ಮೂಲಕ ಹಳೆಯ ಒಡಂಬಡಿಕೆಯಿಂದ ನಿರೀಕ್ಷೆ ಮಾಡಲಾದುದನ್ನು ನೆರವೇರಿಸುವ ಸಲುವಾಗಿ ಹೊಸ ಒಡಂಬಡಿಕೆಯನ್ನು ಸ್ಥಾಪಿಸಿದನು. ಒಬ್ಬ ದೈವೀಕ ಮಾನವ ಯಾಜಕನು ನೀಡಬಲ್ಲ ಪರಿಪೂರ್ಣವಾದದನ್ನು ಶಾಶ್ವತವಾದುದನ್ನು ಹೊಸ ಒಡಂಬಡಿಕೆಯು ಒದಗಿಸಿ ಕೊಟ್ಟಿದೆ. ಈ ಮಹಾಯಾಜಕನು ಆಜ್ಞೆಗಳನ್ನು ಕೇವಲ ವಿವರಿಸುವುದು ಮಾತ್ರವಲ್ಲ. ನಮ್ಮ ಹೃದಯಗಳ ಮೇಲೆ ಅವುಗಳನ್ನು ಬರೆಯುವವನಾಗಿದ್ದಾನೆ. ಈ ಯಾಜಕನು ನಮಗೆ ಕ್ಷಮೆ ಒದಗಿಸುವ ಯಜ್ಞವನ್ನು ಸಮರ್ಪಿಸುತ್ತಾನೆ. ಈ ಯಾಜಕನು ನಮ್ಮನ್ನು ತೊಳೆದು ರೂಪಾಂತರಗೊಳಿಸುತ್ತಾನೆ. ಆತನು ನಮ್ಮ ಕಠಿಣವಾದ ಹೃದಯಗಳನ್ನು ಮೃದುನಾದ ಹೃದಯಗಳನ್ನಾಗಿ ಮಾರ್ಪಡಿಸುತ್ತಾನೆ (ಯೆಹೆಜ್ಕೇಲ 36:26). ಆತನು ನಿಜವಾಗಿಯೂ ನಮ್ಮನ್ನು ಮರುಸೃಷ್ಟಿ ಮಾಡುತ್ತಾನೆ (2 ಕೊರಿಂಥ

5:17). ಆತನು ನಮ್ಮನ್ನು ದೇವ ಸನ್ನಿಧಿಗೆ ಪ್ರವೇಶ ಮಾಡಿಸುವ ಮೂಲಕ ನಂಬಲಸಾಧ್ಯವಾದ ರೀತಿಯಲ್ಲಿ ಆಶೀರ್ವದಿಸುತ್ತಾನೆ.

ಯೇಸುಕ್ರಿಸ್ತನು ಭವಿಷ್ಯದಲ್ಲಿ ಮಾಡುವ ಕೆಲಸವನ್ನು ಸೂಚಿಸುವುದಕ್ಕೋಸ್ಕರ ದೇವರ ಹಳೆಯ ಒಡಂಬಡಿಕೆಯನ್ನು ವಿನ್ಯಾಸಗೊಳಿಸಿದನು. ಇದರ ವಿನ್ಯಾಸ ಮತ್ತು ಉದ್ದೇಶವು ಸುಂದರವಾದುದಾಗಿತ್ತು. ಆದಾಗ್ಯೂ ಕೆಲವರು ಅದರ ಉದ್ದೇಶವನ್ನು ತಪ್ಪಾಗಿ ಅರ್ಥೈಸಿಕೊಂಡಿದ್ದಾರೆ. ಅದರಲ್ಲಿರುವ ಸಂಕೇತಗಳನ್ನು, ಛಾಯೆಗಳನ್ನು ಬಿಡಲೊಲ್ಲದೆ ಮತ್ತು ಸಂಕೇತಗಳು ಸೂಚಿಸುವ ಸತ್ಯಗಳನ್ನು ಅಂಗೀಕರಿಸದೆ ಯೇಸುಕ್ರಿಸ್ತನ ಯಾಜಕ ಸೇವೆಯಿಂದ ಸಿಗುವ ಅದ್ಭುತವಾದ ಆಶೀರ್ವಾದಗಳನ್ನು ಅವರು ತಪ್ಪಿಸಿಕೊಳ್ಳುತ್ತಾರೆ (ಅವರು ಸಂಕೇತಗಳನ್ನು ಹಿಡಿದುಕೊಂಡು ಅವುಗಳು ಸೂಚಿಸುವ ಕ್ರಿಸ್ತನ ಯಾಜಕತ್ವವನ್ನು ಬಿಟ್ಟು ಬಿಡುತ್ತಾರೆ).

"ಕ್ರಿಸ್ತನು ದೇವಾಲಯದ ಅಡಿಪಾಯವೂ ಅದರ ಜೀವವೂ ಆಗಿದ್ದಾನೆ. ಅದರಲ್ಲಿ ನಡೆಯುವ ಸೇವೆಗಳು ದೇವರ ಮಗನಾದ ಯೇಸುಕ್ರಿಸ್ತನ ಸಮರ್ಪಣೆಗೆ ಮಾದರಿಯಾಗಿವೆ. ಯೇಸುಕ್ರಿಸ್ತನ ಮಧ್ಯಸ್ತಿಕೆಯ ಪಾತ್ರವನ್ನು ಮತ್ತು ಕೆಲಸವನ್ನು ಪ್ರತಿಬಿಂಬಿಸಲು ಯಾಜಕೋದ್ಯೋಗವು ಸ್ಥಾಪಿಸಲ್ಪಟ್ಟಿತು. ಯಜ್ಞ ಸಮರ್ಪಣೆಯ ಇಡೀ ಯೋಜನೆಯು ಲೋಕವನ್ನು ವಿಮೋಚಿಸಲು ನಡೆಯುವ ರಕ್ಷಕನ ಮರಣದ ಛಾಯಾ ರೂಪವಾಗಿದೆ. ಯಾವ ಶತಶತಮಾನಗಳಿಂದಲೂ ಸೂಚಿತವಾಗಿರುವ ಯಾವ ಮಹಾಘಟನೆಯು ನೆರವೇರಿತೋ ಅದರ ನಂತರ ಈ ಯಜ್ಞಸಮರ್ಪಣೆಗೆ ಯಾವ ಸಫಲತೆಯೂ ಇರುವುದಿಲ್ಲ (ಕ್ರಿಸ್ತನ ಮರಣದ ನಂತರ ಪಶುಗಳ ಸಮರ್ಪಣೆಯಿಂದ ಯಾವ ಪ್ರಯೋಜನವು ಇರುವುದಿಲ್ಲ)– ಎಲೆನ್ ಜಿ ವೈಟಮ್ಮನವರ ದಿ ಡಿಸೈರ್ ಆಫ್ ಏಜಸ್ ಪುಸ್ತಕದಲ್ಲಿ 165ನೇ ಪುಟ.

**ಶುಕ್ರವಾರ** **ಜನವರಿ 7**

**ಹೆಚ್ಚಿನ ಚಿಂತನೆ :** ಎಲ್ಲಾ ಉತ್ತಮವಾದ ಮತ್ತು ನಿರೀಕ್ಷೆಯುಳ್ಳ ಸತ್ಯಗಳ ಇಬ್ರಿಯ ಪತ್ರಿಕೆಯಲ್ಲಿ ಇದ್ದಾಗ್ಯೂ ಉತ್ತುಂಗಕ್ಕೇರುವ ಎಚ್ಚರಿಕೆಯ ಸರಣಿಗಳು 10, 11, 12ನೇ ಅಧ್ಯಾಯಗಳಲ್ಲಿವೆ.

ಈ ವಿಭಾಗಗಳು ಕನಿಷ್ಠ ಎರಡು ಸಾಮಾನ್ಯ ಅಂಶಗಳನ್ನೊಳಗೊಂಡಿವೆ. ಮೊದಲನೆಯದು ಎಲ್ಲವೂ ಇಬ್ರಿಯ ಪತ್ರಿಕೆಯ ಓದುಗರನ್ನು ಅರಣ್ಯದಲ್ಲಿ ಅಲೆಯುತ್ತಿದ್ದ

ಇಸ್ರಾಯೇಲ್ಯರಿಗೆ ಹೋಲಿಸುತ್ತವೆ. ಎರಡನೆಯದು ಎಲ್ಲವೂ ನಮ್ಮನ್ನು ನಂಬಿಕೆಯನ್ನು ಹೊಂದಿಕೊಳ್ಳುವಂತೆ ಎಚ್ಚರಿಸುತ್ತವೆ.

ಐಗುಪ್ತದೇಶದಿಂದ ಬಿಡುಗಡೆಗೊಳಿಸಲು ದೇವರು ತನ್ನ ಅಗಾಧವಾದ ಶಕ್ತಿಯನ್ನು ಪ್ರದರ್ಶಿಸಿ ಮಾಡಿದ ಸೂಚಕ ಕಾರ್ಯಗಳನ್ನು ಮತ್ತು ಅದ್ಭುತಗಳನ್ನು ಕಣ್ಣಾರೆ ಕಂಡ ಜನಾಂಗವೆ ಅರಣ್ಯದಲ್ಲಿ ಅಲೆದಾಡಿದ ಜನಾಂಗ ಅವರು ದೇವರು ಸಿನಾಯಿ ಬೆಟ್ಟದಿಂದ ಆಡಿದ ಮಾತುಗಳನ್ನು, ಹತ್ತು ಆಜ್ಞೆಗಳನ್ನು ಕೇಳಿಸಿಕೊಂಡವರು. ಅವರು ರಾತ್ರಿಯಲ್ಲಿ ಅಗ್ನಿಸ್ತಂಭವನ್ನು ಹಗಲಿನಲ್ಲಿ ಮೇಘಸ್ತಂಭದ ರಕ್ಷಣೆಯನ್ನು ಕಂಡವರು. ಅವರು ಪರಲೋಕದಿಂದ ಬಂದ ಆಹಾರವಾದ ಮನ್ನವನ್ನು ತಿಂದವರು. ಎಲ್ಲೆಲ್ಲಿ ಪಾಳೆಯ ಮಾಡಿಕೊಂಡು ತಂಗುತ್ತಿದ್ದರೋ ಅಲ್ಲೆಲ್ಲಾ ಬಂಡೆಯಿಂದ ಬಂದ ನೀರನ್ನು ಕುಡಿದವರು. ಆದರೆ ಅವರು ಸೇರಬೇಕಾದ ವಾಗ್ದಾನದ ದೇಶದ ಮೇರೆಯನ್ನು ತಲುಪಿದಾಗ್ಯೂ ದೇವರನ್ನು ನಂಬಲಾರದೆ ಹೋದರು. ಅವರಿಗೆ ನಂಬಿಕೆಯ ಕೊರತೆಯಿತ್ತು, ನಂಬಿಕೆಯಿಲ್ಲದೆ ದೇವರನ್ನು ಮೆಚ್ಚಿಸುವುದು ಅಸಾಧ್ಯ (ಇಬ್ರಿಯ 11:6).

ನಾವು ಸಹಾ ಅರಣ್ಯದಲ್ಲಿ ಅಲೆದಾಡಿದ ಜನಾಂಗದಂತೆ ಇಂದು ನಮ್ಮ ವಾಗ್ದಾನ ದೇಶದ ಗಡಿಗೆ ಬಂದು ತಲುಪಿದ್ದೇವೆ ಎಂಬುದಾಗಿ ಪೌಲನು ಹೇಳುತ್ತಾನೆ (ಇಬ್ರಿಯ 10:37–39). ನಮಗಿರುವ ಅವಕಾಶಗಳು ಮತ್ತು ಜವಾಬ್ದಾರಿಗಳು ಬಹಳ ದೊಡ್ಡವುಗಳು. ನಾವು ಸಿನಾಯಿ ಬೆಟ್ಟದಿಂದ ದೇವರು ಆಡಿದ ಮಾತುಗಳನ್ನು ಕೇಳಿಸಿಕೊಂಡಿಲ್ಲದಿರಬಹುದು ಆದರೆ ಸಿನಾಯಿ ಬೆಟ್ಟದಲ್ಲಿ ದೇವರು ತೋರಿಸಿದ್ದಕ್ಕಿಂತಲೂ ದೊಡ್ಡದಾದ ಪ್ರಕಟಣೆಯನ್ನು ಪರಿಶುದ್ಧ ವಾಕ್ಯದಲ್ಲಿ ನಾವು ಕಂಡಿದ್ದೇವೆ.

ಅದು ರಕ್ತ ಮಾಂಸಧಾರಿಯಾಗಿ ಬಂದ ಯೇಸುವೇ (ಇಬ್ರಿಯ 12:18–24). ಆದರೆ ನಮಗೆ ನಂಬಿಕೆ ಇರುತ್ತದೆಯೆ ಎಂಬುದೇ ಪ್ರಶ್ನೆ. ಪೌಲನು ತನ್ನ ಪತ್ರಿಕೆಯಲ್ಲಿ ನಂಬಿಗಸ್ತರ ದೊಡ್ಡ ಪಟ್ಟಿಯನ್ನು ಕೊಟ್ಟು ನಮ್ಮನ್ನು ಪ್ರೋತ್ಸಾಹಿಸುತ್ತಾನೆ. ಆ ಪಟ್ಟಿಯಲ್ಲಿ ಯೇಸುಕ್ರಿಸ್ತನ ಹೆಸರೂ ಸೇರಿದೆ.

## ಚರ್ಚಿಸಬೇಕಾದ ಪ್ರಶ್ನೆಗಳು

1. ಯೇಸುಕ್ರಿಸ್ತನು ಪರಾಕ್ರಮಶಾಲಿಯಾಗಿ ನಮಗಿಂತ ಮುಂದಾಗಿ ಹೋಗಿ ಸೈತಾನನ ಜೊತೆ ಯುದ್ಧ ಮಾಡುತ್ತಾನೆಂದು ನಮಗೆ ತಿಳಿದದೆ. ನಾವು ಸಭೆಯಾಗಿ ಒಟ್ಟಾಗಿ ಸೇರಿ ನಮ್ಮ ವೀರಾಗ್ರಣಿಯಾದ ಯೇಸುಕ್ರಿಸ್ತನ ಹಿಂದೆ ನಿಂತು ಹೇಗೆ ಹೋರಾಡಬಲ್ಲೆವು? ಸೈತಾನನು ಪೂರ್ವದಲ್ಲಿ ಇಸ್ರಾಯೇಲ್ಯರನ್ನು ಹೇಗೆ ದುರ್ಬಲಗೊಳಿಸಿದ?

2. ವಿಶ್ವಾಸಿಗಳಾದ ನಾವು ದೇವರ ಮಾರ್ಗದರ್ಶನದ ಅಡಿಯಲ್ಲಿ ಒಂದು ಯಾಜಕ ಸಮುದಾಯನಾಗಿದ್ದೇವೆ. ನಿಮ್ಮ ಸ್ಥಳೀಯ ಸಭೆಯು ಯಾವ ರೀತಿಯಲ್ಲಿ ದೇವರಿಗೆ ಸ್ತುತಿಯಜ್ಞವನ್ನು ಉತ್ತಮ ಕಾರ್ಯಗಳನ್ನು ಅರ್ಪಿಸಬಹುದು? ದಯವಿಟ್ಟು ನಿರ್ದಿಷ್ಟರಾಗಿಯೂ ವ್ಯವಹಾರ್ಯರಾಗಿಯೂ ಇರ್ರಿ.

3. ಯಾವ ರೀತಿಯಲ್ಲಿ ನಮ್ಮ ಪರಿಸ್ಥಿತಿಯು ವಾಗ್ದಾನ ದೇಶದ ಗಡಿ ಪ್ರದೇಶದಲ್ಲಿ ನಿಂತು ಅದನ್ನು ಸ್ವಲ್ಪದರಲ್ಲೇ ದಾಟುವುದಕ್ಕಿದ್ದ ಇಸ್ರಾಯೇಲ್ಯರಿಗೆ ಹೋಲುತ್ತದೆ? ಈ ಹೋಲಿಕೆಗಳಿಂದ ನಾವು ಯಾವ ಪಾಠಗಳನ್ನು ಕಲಿಯಬಹುದು?